24	ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆ	7.63
25	ವಜ್ರನಕಟ್ಟೆ ಕುಡಿಯುವ ನೀರಿನ ಯೋಜನೆ	0.21
26	ಚಿಕ್ಕನಾಯಕನಹಳ್ಳಿ ಕುಡಿಯುವ ನೀರಿನ ಯೋಜನೆ	7.11
27	ಬೆಳ್ಳಾವಿ ಕುಡಿಯುವ ನೀರಿನ ಯೋಜನೆ	0.60
28	ಕಾಂಟೂರು ಕುಡಿಯುವ ನೀರಿನ ಯೋಜನೆ	–
29	ದಬ್ಬೆಘಟ್ಟ ಕುಡಿಯುವ ನೀರಿನ ಯೋಜನೆ	0.02
Total		25951.19

ತುಂಗಭದ್ರಾ ಎಡದಂಡೆ ಮುಖ್ಯ ನಾಲೆಯ ಸುರಂಗ

183(281); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ತುಂಗಭದ್ರಾ ಎಡದಂಡೆ ಮುಖ್ಯ ನಾಲೆಯಲ್ಲಿ ಬರುವ ಪಾಪಯ್ಯ ಸುರಂಗ ಮಾರ್ಗವನ್ನು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಈ ಕಾಮಗಾರಿಯನ್ನು ಯಾವ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ಉದ್ದೇಶವಿದೆ;

ಇ) ತುಂಗಭದ್ರಾ ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ಬರುವ 0 ದಿಂದ 47ನೇ ಕಿ.ಮೀ.ನಲ್ಲಿ ಬರುವ ಅಕ್ವಗೇಟ್ಸ್‌ಗಳನ್ನು ಎತ್ತರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ತುಂಗಭದ್ರಾ ಎಡದಂಡೆ ಮುಖ್ಯ ನಾಲೆಯಲ್ಲಿ ಬರುವ ಪಾಪಯ್ಯ ಸುರಂಗ ಮಾರ್ಗವನ್ನು ಅಗಲೀಕರಣ ಮಾಡುವ ಬಗ್ಗೆ ಸಾಧಕ ಭಾದಕಗಳನ್ನು

ಪರಿಶೀಲಿಸಿ, ಸಾಧ್ಯಾಸಾಧ್ಯತೆ ವರದಿಯನ್ನು ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮರವರನ್ನು ಕೋರಲಾಗಿದೆ.

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು

184 (574); ಶ್ರೀ ಸಿ.ಎನ್.ಬಾಲಕೃಷ್ಣ

ಅ) ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳೇನು;

ಆ) ಕೃಷಿಕರಿಗೆ ಬೇಕಾಗುವ ನೀರಾವರಿ ಸೌಲಭ್ಯದ ಬೇಡಿಕೆ ಮತ್ತು ಪ್ರಸ್ತುತ ಇರುವ ನೀರಾವರಿ ಸೌಲಭ್ಯಗಳ ಪ್ರಮಾಣ ಕುರಿತಾದ ವಿವರಗಳೇನು;

ಇ) ಕೃಷಿ ಪ್ರಧಾನ ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ನೂತನ ಪ್ರಸ್ತಾವನೆಗಳ ವಿವರಗಳೇನು?

ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರ ಈ ಕೆಳಕಂಡಂತಿದೆ:

ಕ್ರ ಸಂ	ಯೋಜನೆ ಹೆಸರು	ಯೋಜಿತ ಅಚ್ಚುಕಟ್ಟು(ಹೆ)	ಸೃಷ್ಟಿಸಿರುವ ಅಚ್ಚುಕಟ್ಟು (ಹೆ)	ಆಗಿರುವ ವೆಚ್ಚ	ಪ್ರಸ್ತುತ ಹಂತ
1	ಹೇಮಾವತಿ	2,83,592	2,45,285	3315.63	ಹಾಸನ ಜಿಲ್ಲೆಯಲ್ಲಿ ಬರುವ ಕಾಮಗಾರಿಗಳು ಪೂರ್ಣಗೊಂಡಿವೆ